KAMD310016912023

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.

ಉಪಸ್ಥಿತರು :- ಶ್ರೀಮತಿ. **ಪಾರ್ವತಿ ಸಿ.ಎಂ.,** ಬಿ.ಎ.ಎಲ್., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

ದಿನಾಂಕ **01** ನೇ ಆಗಸ್ಟ್ **2026**

ಸಿ.ಸಿ ನಂಬರ್ **894/2023**

ಪಿರ್ಯಾದುದಾರರು :- ಸರ್ಕಾರದ ಪರವಾಗಿ
ಅಬಕಾರಿ ಪೊಲೀಸರು

*(*ಪ್ರತಿನಿಧಿಸುವವರು ಮಾನ್ಯ
ಸಹಾಯಕ ಸರ್ಕಾರಿ ಅಭಿಯೋಜಕರು*)*

ವಿರುದ್ಧ

ಆರೋಪಿ :- ನಿಂಗರಾಜ ಬಿನ್ ಲೇ.ಲಿಂಗಯ್ಯ,
34 ವರ್ಷ, ವಾಸಃ ಉಗ್ರಾಣದಪುರದ ದೊಡ್ಡಿ ಗ್ರಾಮ,
ಮಳವಳ್ಳಿ ತಾಲ್ಲೂಕು,

*(*ಪ್ರತಿನಿಧಿಸುವವರು ಕೆ.ಬಿ.ಎನ್.,ವಕೀಲರು*)*

## ತೀರ್ಪು

ಪ್ರಸ್ತುತ ತೀರ್ಪು ಅಬಕಾರಿ ಆರಕ್ಷಕ ನಿರೀಕ್ಷಕರು ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಸಲ್ಲಿಸಿದ ಅಂತಿಮ ವರದಿಯ ಮೇಲೆ ಉದ್ಭವವಾಗಿರುತ್ತದೆ.

**2.** ಅಭಿಯೋಜನಾ ಪ್ರಕರಣದ ಸಂಕ್ಷೀಪ್ತ ಸಾರಾಂಶವೇನೆಂದರೆ**,**

ದಿನಾಂಕ:07.09.2021 ರಂದು ಬೆಳಿಗ್ಗೆ 11.20 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ಮಂಡ್ಯ ಉಪ-ವಿಭಾಗ ಆದ ತಾನು ಇತರೇ ಸಿಬ್ಬಂದಿಯೊಂದಿಗೆ ಮದ್ದೂರು ತಾಲ್ಲೂಕು ಶಿವಪುರ ಟೌನ್ ಹಳೇ ಕೊಪ್ಪ ರಸ್ತೆಯಲ್ಲಿರುವ ಗಾಂಧಿ ಸರ್ಕಲ್ ಬಳಿ ಗಸ್ತಿನಲ್ಲಿದ್ದಾಗ, ಆರೋಪಿಯು ಟಿ.ವಿ.ಎಸ್.ಫಿಯರೋ ಕೆಎ.04.ಇಎಫ್.3204 ಮೋಟಾರ್ ಸೈಕಲ್ ನಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ 90 ಮಿಲಿಯ ಹೈವಾಡ್ಸ್ ಚಿಯರ್ಸ್ ವಿಸ್ಕಿ 96 ಟೆಟ್ರಾ ಪ್ಯಾಕ್ ಗಳು, ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ 48 ಟೆಟ್ರಾ ಪ್ಯಾಕ್ ಗಳು, 180 ಮಿಲಿಯ ಬ್ಯಾಕ್ ಪೇಪರ್ ವಿಸ್ಕಿ 15 ಟೆಟ್ರಾ ಪ್ಯಾಕ್ ಗಳು ಹಾಗೂ 330 ಮಿಲಿಯ ಕಿಂಗ್ ಫಿಷರ್ ಸ್ಟ್ರಾಂಗ್ ಬಿಯರ್ 10 ಟಿನ್ ಗಳ ಒಟ್ಟು 15.660 ಲೀಟರ್ ಮದ್ಯ ಹಾಗೂ 3.300 ಲೀಟರ್ ಬಿಯರ್ ಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿರುತ್ತಾರೆ. ಆ ಮೂಲಕ ಆರೋಪಿಯು ಮೇಲ್ಕಂಡ ಅಪಾದಿತ ಕೃತ್ಯಗಳನ್ನು ಎಸಗಿರುತ್ತಾರೆಂಬುದು ಅಭಿಯೋಜನಾ ಪ್ರಕರಣದ ಸಂಕ್ಷೀಪ್ತ ಸಾರಾಂಶವಾಗಿರುತ್ತದೆ.

**3.** ಅಭಿಯೋಜನಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದಂತೆ ಚಾಸಾ.1 ಮಂಜುಳ ಕೆ ಎಂ ರವರು ಸ್ವಯಂ ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ಅಂತಿಮವಾಗಿ ಚಾಸಾ.7 ರವರು ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವುದು ಗೋಚರವಾಗಿರುತ್ತದೆ.

**4.** ಅಭಿಯೋಜನಾ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಯಥಾಪ್ರಕಾರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 190 ಕ್ಲಾಸ್ (1) (ಬಿ) ರಡಿಯಲ್ಲಿ ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

**5.** ಆರೋಪಿಯು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

ನ್ಯಾಯಾಲಯದ ಸಮನ್ಸ್ ಗೆ ಪ್ರತಿಯಾಗಿ ಹಾಜರಾದ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ಪ್ರತ್ಯಾಯೋಜಿಸಲಾಗಿರುವಂತೆ ಅಭಿಯೋಜನಾ ದಾಖಲಾತಿಗಳ ನಕಲನ್ನು ನೀಡಲಾಗಿರುತ್ತದೆ. ಆರೋಪಿಯು ನಿರ್ದೋಷಿ ಎಂದು ಪರಿಗಣಿಸುವ ಯಾವುದೇ ಅಂಶಗಳು ಅಭಿಯೋಜನಾ ದಾಖಲಾತಿಗಳಲ್ಲಿ ಲಭ್ಯವಿಲ್ಲದಿರುವ ಕಾರಣ ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರ ಅಪರಾಧಗಳಿಗೆ ದೋಷಾರೋಪಣೆ ರಚಿಸಿ ಅವರಿಗೆ ತಿಳಿಸಿದ ಭಾಷೆಯಲ್ಲಿ ಓದಿ ವಿವರಿಸಲಾಗಿರುತ್ತದೆ. ಅರ್ಥೈಸಿಕೊಂಡ ಆರೋಪಿಯು ತಾನು ತಪ್ಪನ್ನು ಎಸಗಿರುವುದಿಲ್ಲ, ಅಧಿವಿಚಾರಣೆಯಾಗಲಿ ಎಂದು ಉತ್ತರಿಸಿದ ಪರಿಣಾಮವಾಗಿ ಪ್ರಕರಣವನ್ನು ಅಧಿವಿಚಾರಣೆಗೆ ಕಾಯ್ದಿರಿಸಲಾಗಿರುತ್ತದೆ.

**6.** ಅಭಿಯೋಜನಾ ಪಕ್ಷವು ಆರೋಪಿಯ ಮೇಲೆ ಹೊರಿಸಿರುವ ಆರೋಪವನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರಿಂದ 3 ವಿಚಾರಣೆ ಮಾಡಿರುತ್ತಾರೆ. ಮೇಲ್ಕಂಡ ವಿಚಾರಣಾ ಕಾಲದಲ್ಲಿ ನಾಲ್ಕು ದಸ್ತಾವೇಜಗಳನ್ನು ನಿಪಿ.1 ರಿಂದ ನಿಪಿ.4 ಎಂದು ನಿಶಾನೀಕರಿಸಲಾಗಿರುತ್ತದೆ. ಮತ್ತು ಇಪ್ಪತ್ತೇಳು ಮುದ್ದೆ ಮಾಲನ್ನು ಮು.ಮಾ 1 ರಿಂದ 27 ಎಂದು ಗುರುತಿಸಲಾಗಿರುತ್ತದೆ.

**7.** ಅಭಿಯೋಜನೆಯ ಪ್ರಕರಣದ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**8.** ಉಭಯ ಪಕ್ಷಕಾರರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಕಡತದ ಮೇಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪರಿಣಾಮವಾಗಿ ಪ್ರಸ್ತುತ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

***1.*** ದಿನಾಂಕ ***:07.09.2021*** ರಂದು ಬೆಳಿಗ್ಗೆ ***11.20*** ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ಮಂಡ್ಯ ಉಪ-ವಿಭಾಗ ಆದ ತಾನು ಇತರೇ ಸಿಬ್ಬಂದಿಯೊಂದಿಗೆ ಮದ್ದೂರು ತಾಲ್ಲೂಕು ಶಿವಪುರ ಟೌನ್ ಹಳೇ ಕೊಪ್ಪ ರಸ್ತೆಯಲ್ಲಿರುವ ಗಾಂಧಿ ಸರ್ಕಲ್ ಬಳಿ ಗಸ್ತಿನಲ್ಲಿದ್ದಾಗ, ಆರೋಪಿಯು ಟಿ.ವಿ.ಎಸ್.ಫಿಯರೋ

ಕೆಎ.***04.***ಇಎಫ್.***3204*** ಮೋಟಾರ್ ಸೈಕಲ್ ನಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ***90*** ಮಿಲಿಯ ಹೈವಾಡ್ಸ್ ಚಿಯರ್ಸ್ ವಿಸ್ಕಿ ***96*** ಟೆಟ್ರಾ ಪ್ಯಾಕ್ ಗಳು***,*** ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ ***90*** ಮಿಲಿಯ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ***48*** ಟೆಟ್ರಾ ಪ್ಯಾಕ್ ಗಳು***, 180*** ಮಿಲಿಯ ಬ್ಯಾಕ್ ಪೇಪರ್ ವಿಸ್ಕಿ ***15*** ಟೆಟ್ರಾ ಪ್ಯಾಕ್ ಗಳು ಹಾಗೂ ***330*** ಮಿಲಿಯ ಕಿಂಗ್ ಫಿಷರ್ ಸ್ಟ್ರಾಂಗ್ ಬಿಯರ್ ***10*** ಟಿನ್ ಗಳ ಒಟ್ಟು ***15.660*** ಲೀಟರ್ ಮದ್ಯ ಹಾಗೂ ***3.300*** ಲೀಟರ್ ಬಿಯರ್ ಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡಿರುವ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ ***32(1)*** ಮತ್ತು ***38(*ಎ*)*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ***?***

***2.*** ಏನು ಆದೇಶ***?***

**9.** ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಪಕ್ಷವು ಕಡತದ ಮೇಲೆ ಹಾಜರುಪಡಿಸಿರುವ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿದೆ. ಆ ಪರಿಣಾಮವಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

ಅಂಶ **1** ಃ- ನಕಾರಾತ್ಮಕವಾಗಿ**,**

ಅಂಶ **2** ಃ- ಅಂತಿಮ ಆದೇಶದಂತೆ**,** ಈ ಕೆಳಕಂಡಂತೆ**,**

## <u>ಕಾರಣಗಳು</u>

**10.** <u>ಅಂಶ **1**</u> ಃ- ಆರೋಪಿಯು ಘಟನಾ ದಿವಸ, ಘಟನಾ ಸ್ಥಳದಲ್ಲಿ, ಘಟನಾ ಸಮಯದಲ್ಲಿ ಆಪಾದಿತ ಕೃತ್ಯವನ್ನು ಎಸಗುವುದರ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂಬುದು

ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ.

**11.** ಕ್ರಿಮಿನಲ್ ಪ್ರಕ್ರಿಯಾ ತತ್ವದ ಅಡಿಯಲ್ಲಿ ಆರೋಪಿಯ ಮೇಲೆ ಹೊರಿಸಿರುವ ಆಪಾದನೆಗಳ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆ ಅಭಿಯೋಜನೆಯದ್ದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರಿಂದ 3 ರವರ ಮೌಖಿಕ ಸಾಕ್ಷ್ಯ ಹಾಗೂ ನಿಪಿ.1 ರಿಂದ 4 ರ ದಸ್ತಾವೇಜು ಸಾಕ್ಷ್ಯ ಮತ್ತು ಮು.ಮಾ 1 ರಿಂದ 27 ಮುದ್ದೆ ಮಾಲುಗಳನ್ನು ಕಡತದ ಮೇಲೆ ತಂದಿರುತ್ತಾರೆ.

**12.** ಪ್ರಸ್ತುತ ಪ್ರಕರಣದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶವೇನೆಂದರೆ ಈ ಪ್ರಕರಣವನ್ನು ಚಾಸಾ.1 ಮಂಜುಳ ಕೆ ಎಂ ರವರು ಸ್ವಯಂ ಪ್ರೇರಿತವಾಗಿ ದೂರನ್ನು ದಾಖಲು ಮಾಡಿಕೊಂಡು ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ನಂತರ ಚಾಸಾ.7 ರವರು ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದಾಗ ಚಾಸಾ.1 ರವರನ್ನು ಪ್ರಾಸಾ.3 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿ 07-09-2021 ರಂದು ಬೆಳಿಗ್ಗೆ 11-20 ಗಂಟೆ ಸಮಯದಲ್ಲಿ ಮದ್ದೂರು, ಶಿವಪುರ ಟೌನ್ ಹಳೆ ಕೊಪ್ಪ ರಸ್ತೆಯ ಬಳಿಯಲ್ಲಿರುವ ಗಾಂಧಿ ಸರ್ಕಲ್ ಬಳಿ ನಾನು ಚಾಸಾ-2, 3 ರವರೊಂದಿಗೆ ಸರ್ಕಾರಿ ವಾಹನ ನಂ.ಕೆಎ-11-ಜಿ-515 ರಲ್ಲಿ ಗಸ್ತು ನಡೆಸುತ್ತಿದ್ದಾಗ, ಶಿವಪುರ ಕಡೆಯಿಂದ ಚಾಮನಹಳ್ಳಿ ಕಡೆಗೆ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಪ್ಲಾಸ್ಟಿಕ್ ಚೀಲದ ಗಂಟುನ್ನು ಇಟ್ಟುಕೊಂಡು ಬರುತ್ತಿದ್ದು, ದೂರದಿಂದಲೇ ಇಲಾಖಾ ವಾಹನ ಮತ್ತು ಸಮವಸ್ತ್ರಧಾರಿಯಾದ ನಮ್ಮಗಳನ್ನು ಕಂಡು, ವಾಹನ ಮತ್ತು ಪ್ಲಾಸ್ಟಿಕ್ ಚೀಲದ ಗಂಟುನ್ನು ಬೀಳಿಸಿ ಓಡಿ ಹೋಗಿರುತ್ತಾರೆ. ನಂತರ ನಾವುಗಳು ಹಿಡಿಯಲು ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ. ನಂತರ ವಾಹನದ ಹತ್ತಿರ ಬಂದು, ಅಲ್ಲಿಯೇ ಇದ್ದ ಸ್ಥಳೀಯರನ್ನು ಶೋಧನಾ ಕಾಲದಲ್ಲಿ ಪಂಚರಾಗಿ ಸಹಕರಿಸಲು ಕೋರಿದ್ದು, ಸದರಿಯವರು ನಿರಾಕರಿಸಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ನಾನು ಶೋಧನಾ ವಾರೆಂಟ್ ನ್ನು ತಯಾರಿಸಿರುತ್ತೇನೆ. ಸದರಿ ನಿಂತಿದ್ದ ಗಾಡಿಯು ಕೆಎ-04-ಇಎಫ್-2304 ಆಗಿದ್ದು, ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಲಾಗಿ

ಸದರಿಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕ್ ಗಳು, ಮತ್ತೊಂದು ರಟ್ಟಿನ ಪೇಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 48 ಟೆಟ್ರಾ ಪ್ಯಾಕ್ ಗಳು, ಮತ್ತು 180 ಬ್ಯಾಕ್ ಪೈಪರ್ ವಿಸ್ಕಿಯ 15 ಟೆಟ್ರಾ ಪ್ಯಾಕ್ ಗಳು, ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ನ 10 ಟಿನ್ ಗಳು ಇದ್ದವು. ಸದರಿ ಮಧ್ಯವನ್ನು ನಿಪಿ-2 ರಂತೆ ಚಾಸಾ-3 ರವರು ನನ್ನ ಸಮಕ್ಷಮ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಬೆಳಗ್ಗೆ 11.20 ರಿಂದ ಮದ್ಯಾಹ್ನ 1.00 ಗಂಟೆಯವರೆಗೂ ಮಾಡಿರುತ್ತೇವೆ. ಅವುಗಳಲ್ಲಿ ಕ್ರಮ ಸಂಖ್ಯೆ 1 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಮತ್ತು ಕ್ರಮ ಸಂಖ್ಯೆ 2 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಗಳು, ಬ್ಯಾಕ್ ಪೈಪರ್ ವಿಸ್ಕಿಯ 180 ಮಿಲಿಯ 5 ಟೆಟ್ರಾ ಪ್ಯಾಕ್ ಗಳು ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ 2 ಟಿನ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ನಿಪಿ-1 ರಂತೆ ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ. ಮುಂದಿನ ಕ್ರಮಕ್ಕಾಗಿ ವಿವಾದಿತ ವಾಹನ ಮತ್ತು ಮದ್ಯವನ್ನು ಠಾಣೆಗೆ ತಂದಿರುತ್ತೇವೆ. ನಂತರ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಚಾಸಾ.2 ಸುಧಾಕರ್ ರವರು ಅಬಕಾರಿ ಪೊಲೀಸ್ ಠಾಣೆಯ ಪೇದೆಯಾಗಿದ್ದು, ಅವರು ಚಾಸಾ.1 ರವರ ಜೊತೆ ದಾಳಿಯಲ್ಲಿ ಸಹಕರಿಸಿದ ಬಗ್ಗೆ ಮತ್ತು ಸ್ಥಳ ಪಂಚನಾಮೆಯನ್ನು ಮಾಡಿದ ಬಗ್ಗೆ ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿಃ07-09-2021 ರಂದು ಬೆಳಿಗ್ಗೆ 11-20 ಗಂಟೆ ಸಮಯದಲ್ಲಿ ಮದ್ದೂರು, ಶಿವಪುರ ಟೌನ್ ಹಳೆ ಕೊಪ್ಪ ರಸ್ತೆಯ ಬಳಿಯಲ್ಲಿರುವ ಗಾಂಧಿ ಸರ್ಕಲ್ ಬಳಿ ಚಾಸಾ-1, 3 ರವರೊಂದಿಗೆ ಗಸ್ತು ನಡೆಸುತ್ತಿದ್ದಾಗ, ಶಿವಪುರ ಕಡೆಯಿಂದ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಪ್ಲಾಸ್ಟಿಕ್ ಚೀಲದ ಗಂಟನ್ನು ಇಟ್ಟುಕೊಂಡು ಬರುತ್ತಿದ್ದು ದೂರದಿಂದಲೇ ಇಲಾಖಾ ವಾಹನ ಮತ್ತು ಸಮವಸ್ತ್ರಧಾರಿಯಾದ ನಮ್ಮಗಳನ್ನು ಕಂಡು, ವಾಹನ ಮತ್ತು ಪ್ಲಾಸ್ಟಿಕ್ ಚೀಲದ ಗಂಡನ್ನು ಬೀಳಿಸಿ ಓಡಿ ಹೋಗಿರುತ್ತಾರೆ ಹಿಡಿಯಲು ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ. ನಂತರ ವಾಹನದ ಹತ್ತಿರ ಬಂದು, ಅಲ್ಲಿಯೇ ಇದ್ದ ಸ್ಥಳೀಯರನ್ನು ಶೋಧನಾ ಕಾಲದಲ್ಲಿ ಪಂಚರಾಗಿ ಸಹಕರಿಸಲು ಕೋರಿದ್ದು, ಸದರಿಯವರು ನಿರಾಕರಿಸಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ಚಾಸಾ-1 ರವರು ಶೋಧನಾ ವಾರೆಂಟ್

ನ್ನು ತಯಾರಿಸಿ, ಸದರಿ ನಿಂತಿದ್ದ ಗಾಡಿಯು ಕೆಎ-04-ಇ ಎಫ್ -3204 ಆಗಿದ್ದು, ನೀಲಿ ಸಿಲ್ವರ್ ಬಣ್ಣದ ಟಿ ವಿ ಎಸ್ ಕಂಪೆನಿಯ ಫಿಯರೋ ಗಾಡಿಯಾಗಿದ್ದು, ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಲಾಗಿ ಸದರಿಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕ್ ಗಳು, ಮತ್ತೊಂದು ರಟ್ಟಿನ ಪೇಟ್ಟಿಗೆಯಲ್ಲಿ 90 ಮಿಲಿಯ ಹೈ ವಾರ್ಡ್ಸ್ ಚಿಯರ್ಸ್ ವಿಸ್ಕಿಯ 48 ಟೆಟ್ರಾ ಪ್ಯಾಕ್ ಗಳು, ಮತ್ತು 180 ಬ್ಯಾಕ್ ಪೈಪರ್ ವಿಸ್ಕಿಯ 15 ಟೆಟ್ರಾ ಪ್ಯಾಕ್ ಗಳು, ಹಾಗೂ 330 ಮಿಲಿಯ ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್ ನ 10 ಟಿನ್ ಗಳು ಇದ್ದವು, ಅವುಗಳಲ್ಲಿ ಕ್ರಮ ಸಂಖ್ಯೆ: 1 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಮತ್ತು ಕ್ರಮ ಸಂಖ್ಯೆ:2 ರಿಂದ 90 ಮಿಲಿಯ 10 ಟೆಟ್ರಾ ಪ್ಯಾಕ್ ಗಳು, ಬ್ಯಾಕ್ ಪೈಪರ್ ವಿಸ್ಕಿಯ 180 ಮಿಲಿಯ 5 ಟೆಟ್ರಾ ಪ್ಯಾಕ್ ಗಳು ಹಾಗೂ ಕಿಂಗ್ ಫಿಶರ್ ಸ್ಟ್ರಾಂಗ್ 2 ಟಿನ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ. ಸದರಿ ಮಹಜರ್ ನ್ನು ಬೆಳಿಗ್ಗೆ 11-20 ರಿಂದ ಮಧ್ಯಾಹ್ನ 01-00 ಗಂಟೆಯವರೆಗೂ ಮಾಡಿರುತ್ತೇವೆ. ಮುಂದಿನ ಕ್ರಮಕ್ಕಾಗಿ ವಿವಾದಿತ ವಾಹನ ಮತ್ತು ಮದ್ಯವನ್ನು ಠಾಣೆಗೆ ತಂದಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಚಾಸಾ.7 ಪ್ರೇಮ್ ಸಾಗರ್, ಅಬಕಾರಿ ನಿರೀಕ್ಷಕ ರವರನ್ನು ಪ್ರಾಸಾ.2 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ನಾನು ಈ ಹಿಂದೆ ತನಿಖಾಧಿಕಾರಿಯಾಗಿದ್ದ ಅಬಕಾರಿ ನಿರೀಕ್ಷಕರಾದ ಕೆ ಕುಮಾರ್ ರವರಿಂದ ಜನವರಿ 2023 ರಲ್ಲಿ ಕಡತವನ್ನು ಪಡೆದು ಪರಿಶೀಲಿಸಿದ್ದು, ತನಿಖೆಯು ಅಂತಿಮ ಹಂತಕ್ಕೆ ಬಂದಿತ್ತು. ದಿ 24-03-2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ತಲೆ ಮರಿಸಿಕೊಂಡಿದ್ದ ಆರೋಪಿಗೆ ಸಂಬಂಧಿಸಿದಂತೆ ಮಹಜರ್ ಮಾಡಿ, ನಂತರ ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ ಅವರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೆನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿದ ಪ್ರಾಸಾ-1 ರಿಂದ ಪ್ರಾಸಾ-3 ರವರು ಭಾಗಶಃ ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ತನಿಖೆಗೆ ಅನುಗುಣವಾಗಿ ಸಾಕ್ಷ್ಯವನ್ನು

ನುಡಿದಿದ್ದರೂ ಸಹ ಅಭಿಯೋಜನೆಯವರು ದಾಳಿಯ ಸಮಯದಲ್ಲಿ ಹಾಜರಿದ್ದ ಬೇರೆ ಸ್ವತಂತ್ರ ಸಾಕ್ಷಿದಾರರಾದ ಸಾರ್ವಜನಿಕರನ್ನು ಹಾಜರುಪಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ ಹಾಗೂ ಅಭಿಯೋಜನೆಯು ಆಪಾದಿಸಿದಂತೆ ಆರೋಪಿಯ ವಶದಲ್ಲೇ ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳಲಾಯಿತೆಂಬ ಬಗ್ಗೆ ಅಭಿಯೋಜನೆಯವರು ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯದಿಂದ ಸಾಭೀತುಪಡಿಸದೇ ಇರುವ ಕಾರಣ ತನಿಖಾಧಿಕಾರಿಗಳು ಮತ್ತು ದಾಳಿಗೆ ಸಹಕರಿಸಿದ ಇಲಾಖೆ ಸಿಬ್ಬಂದಿಗಳ ಸಾಕ್ಷ್ಯವು ಈ ಹಂತದಲ್ಲಿ ಸುಸ್ಸಂಬದ್ಧವಾಗುವುದಿಲ್ಲ ಮತ್ತು ಸದರಿಯವರು ಹಿತಾಶಕ್ತಿ ಸಾಕ್ಷಿದಾರರಾಗುತ್ತಾರೆ. ಜೊತೆಗೆ ಅಮಾನತ್ತು ಪಡಿಸಿದ ಎಲ್ಲಾ ಮಧ್ಯವನ್ನು ರಾಸಾಯನಿಕ ತಜ್ಞರ ಅಭಿಪ್ರಾಯ ಕೋರದ ಹೊರತು ಸದರಿ ಅಮಾನತ್ತು ಮುದ್ದೆಮಾಲು ಮಧ್ಯವೇ ಆಗಿತ್ತು ಎಂದು ಪರಿಗಣಿಸಲು ಸಾಧ್ಯವಿಲ್ಲ ಜೊತೆಗೆ ಚಾಸಾ-1 ರವರು ಸದರಿ ಮಧ್ಯದಲ್ಲಿ ಬ್ಯಾಚ್ ನಂಬರ್ ಮತ್ತು ನಿರ್ಮಾಣ ದಿನಾಂಕ ನಮೂದಿಸಿರುವುದಿಲ್ಲ ಎಂದು ತಿಳಿಸಿದ್ದು, ಆದರೆ ಆ ಬಗ್ಗೆ ಕೂಡ ಮಹಜರ್ ನಲ್ಲಿ ನಮೂದಿಸದಿರುವುದು ತನಿಖೆಯ ಲೋಪವಾಗಿದೆ.

**16.** ಅಭಿಯೋಜನೆ ಪರ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಕೂಲಂಕುಶವಾಗಿ ಪರೀಶೀಲಿಸಿದಾಗ, ಅಭಿಯೋಜನೆಯು ಆಪಾದಿಸಿದಂತೆ ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಸಂಶಾಯತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ವಿಚಾರಣೆ ಮಾಡಿರುವ ಪ್ರಾಸಾ.1 ರಿಂದ 3 ರವರ ಹೇಳಿಕೆಗಳು ಒಂದಕ್ಕೊಂದು ಪೂರಕವಾಗಿರುವುದಿಲ್ಲ ಮತ್ತು ಸಾಕಷ್ಟು ಭಿನ್ನತೆಗಳಿಂದ ಕೂಡಿರುತ್ತವೆ. ಈ ಮೇಲ್ಕಂಡ ಎಲ್ಲಾ ಕಾರಣಗಳಿಂದ ವಿಚಾರಣೆ ಮಾಡಿರುವ ಪ್ರಾಸಾ.1 ರಿಂದ 3 ರವರ ಸಾಕ್ಷಿ ವಿಚಾರಣೆಯು ಅಭಿಯೋಜನೆಯ ಪಕ್ಷದವರಿಗೆ ತಮ್ಮ ಪ್ರಕರಣವನ್ನು ರುಜುವಾತು ಪಡಿಸಲು ಯಾವುದೇ ರೀತಿ ಸಹಕಾರಿಯಾಗಿರುವುದಿಲ್ಲ. ಆರೋಪಿಯ ಮೇಲೆ ಮಾಡಿರುವ ಎಲ್ಲಾ ಅಪಾದನೆಗಳನ್ನು ನಿಸ್ಸಂಶಯವಾಗಿ ರುಜುವಾಪಡಿಸುವ ಹೊಣೆಗಾರಿಕೆಯು ಅಭಿಯೋಜನಾ ಪಕ್ಷದವರದ್ದಾಗಿರುತ್ತದೆ. ಈ ಮೇಲ್ಕಂಡ ಪ್ರಕರಣದಲ್ಲಿ ಮೇಲೆ ಚರ್ಚಿಸಲಾದಂತೆ ಪ್ರಾಸಾ.1 ರಿಂದ 3 ರವರೆಗಿನ ಸಾಕ್ಷಿ ವಿಚಾರಣೆಯಲ್ಲಿ ಪ್ರಕರಣ ನಡೆದಿರುವ ಬಗ್ಗೆ ಸಾಕಷ್ಟು ಸಂಶಯಗಳಿಂದ ಕೂಡಿದ್ದು, ಈ ಪ್ರಕರಣದಲ್ಲಿ ಆರೋಪಿಗೆ ಸಂಶಯದ ಲಾಭವನ್ನು ನೀಡುವುದು ಸೂಕ್ತವಾಗಿರುತ್ತದೆ ಮತ್ತು ಆರೋಪಿಯು ಮೇಲ್ಕಂಡ ಅಪರಾಧವನ್ನು ಎಸಗಿರುತ್ತಾರೆಂದು ಸಾಭೀತುಪಡಿಸಲು ಯಾವುದೇ ಸಾಕ್ಷಿ ಆಧಾರಗಳು ಇರುವುದಿಲ್ಲ.

ಆದ್ದರಿಂದ ಅಭಿಯೋಜನಾ ಪಕ್ಷದವರು ಆರೋಪಿಯ ವಿರುದ್ಧ ಮಾಡಿರುವ ಆರೋಪವನ್ನು ರುಜುವಾತು ಪಡಿಸಲು ವಿಫಲವಾದ ಕಾರಣ ಮೇಲ್ಕಂಡ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**<u>17. ಅಂಶ 2 :</u>**- ಮೇಲೆ ಚರ್ಚಿಸಲಾದ ಎಲ್ಲಾ ಯುಕ್ತ ಕಾರಣಗಳ ಪರಿಣಾಮವಾಗಿ ಈ ಕೆಳಕಂಡಂತೆಃ

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿಯ ವಿರುದ್ಧ ಆಪಾದಿಸಲಾಗಿದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿನ ಆಪಾದನೆಗಳಿಗಾಗಿ ಆರೋಪಿಯನ್ನು ನಿರ್ದೋಷಿ ಎಂದು ನಿರ್ಣಯಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಆತನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡುಗಳು ಮತ್ತು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437 (ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮುದ್ದೆ ಮಾಲು 1 ರಿಂದ 27 ಮದ್ಯದ ಪ್ಯಾಕೇಟ್ ಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ತನಿಖಾಧಿಕಾರಿಯವರಿಗೆ ಕಾನೂನು ರೀತ್ಯಾ ಕ್ರಮಕೈಗೊಳ್ಳಲು ಹಿಂದಿರುಗಿಸಬೇಕೆಂದು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **01** ನೇ ಆಗಸ್ಟ್ **2026** ರಂದು ಘೋಷಿಸಲಾಯಿತು)

(ಶ್ರೀಮತಿ. ಪಾರ್ವತಿ ಸಿ.ಎಂ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.

## :: ಅನುಸೂಚಿ ::

ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

| | | |
|---|---|---|
| ಪ್ರಾ.ಸಾ.1 | : | ಸುಧಾಕರ್ |
| ಪ್ರಾ.ಸಾ.2 | : | ಪ್ರೇಮ್ ಸಾಗರ್ |
| ಪ್ರಾ.ಸಾ.3 | : | ಮಂಜುಳ ಕೆ ಎಂ |

ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

| | | |
|---|---|---|
| ನಿ.ಪಿ.1 | : | ಮಾದರಿ ಸೀಲು ನಕಲು |
| ನಿ.ಪಿ.1(ಎ,ಬಿ) | : | ಸಹಿಗಳು |
| ನಿ.ಪಿ.2 | : | ಸ್ಥಳಮಹಜರ್ |
| ನಿ.ಪಿ.2(ಎ,ಬಿ) | : | ಸಹಿಗಳು |
| ನಿ.ಪಿ.3 | : | ಶೋಧನಾ ಸಮುಚಿತ ಆಧಾರ |
| ನಿ.ಪಿ.3(ಎ) | : | ಸಹಿ |
| ನಿ.ಪಿ.4 | : | ಪ್ರಥಮ ವರ್ತಮಾನ ವರದಿ |
| ನಿ.ಪಿ.4(ಎ) | : | ಸಹಿ |

ಆರೋಪಿಗಳ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

--ಇಲ್ಲ--

ಆರೋಪಿಗಳ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

--ಇಲ್ಲ--

ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲುಗಳ ಪಟ್ಟಿ

ಮುದ್ದೆ ಮಾಲು **1** ರಿಂದ **27 :** ಮದ್ಯದ ಪ್ಯಾಕೇಟ್ ಗಳು

**(ಶ್ರೀಮತಿ. ಪಾರ್ವತಿ ಸಿ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.